ಮೈಸೂರು ಸಂಸ್ಥಾನದ ಸರಹದ್ದಿನ ಆಚೆಗೆ ಪಾವತೀಬಗ್ಯಾಗಿ ರವಾನಿಸೋಣಾದ ಸರ್ಕಾರಿ ಕಾಗದ ಪತ್ರಗಳಿಗೋಸ್ಕರ ಯವರಿಂದ ಉಪಯೋಗಿಸಲ್ಪಟ್ಟ ಸರ್ಕಾರಿ ಪೋಸ್ಟೇಜ್ ಲೇಬಿಲಿಗಳ ಬಾಬತು ವ ರೆಜಿಸ್ಟ್ರೇಷ್ ಮತ್ತು ಇನ್ ಷ್ಯೂರೆನ್ಸಿಗಾಗಿ ಪಾವತಿಯಾದ ಫೀಜು ತೋರಿಸುವ ತಖ್ತಾ.

ತಾರೀಖು.	ಸರಕಿನ ಸಂಬಂಧಿಸಿದ ಸರ್ಕಾರಿ ಆಫೀಸರ ಹೆಸರು.	ವಿವರದ ಹುದ್ದೆ.	ಹೆಸರು. ಜಾಗಾ.	ಇವರುಗಳಿಗೆ ಚಿಕಟೂಯಿಸಿದ ಸರ್ಕಾರಿ ಪೋಸ್ಟೇಜ್ ಲೇಬಿಲ್ ಗಳ ಕಿಮ್ಮತ್ತು.			
				ಸಾಧಾರಣ ಪೋಸ್ಟೇಜ್ ಹಾಗಲ್.	ರೆಜಿಸ್ಟ್ರೇಷ್ ಫೀಜು.	ಇನ್ ಷ್ಯೂರೆನ್ಸ್ ಫೀಜು.	ಜುಮ್ಲಾ.

ಎ. ರಂಗಸ್ವಾಮಯ್ಯಂಗಾರ್,
ಕಂಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 537.

ಬೆಂಗಳೂರು ಚಿಕ್ಕಪೇಟೆಗೆ ಕೀರಿದ ಸಂತೋಜಿಪೇಟೇಲಿರತಕ್ಕ ಅರ್ಜಿದಾರರು 1ನೇ ದೊಡ್ಡನ್ಯಾನಮ್ಮ, 2ನೇ ಚಿಕ್ಕನ್ಯಾನಮ್ಮ, ಮೈನರಾದ ಬೆಂಗಳೂರು ಸ್ಥಳದ ಮಾಗೆಸ್ಪನ ಮಗ ಮಲ್ಲಯ್ಯನ ಆಸ್ತಿ ವಿಷಯದಲ್ಲಿ—

ಸದರೀ ಮೈನರಾದ ಮಲ್ಲಯ್ಯನಿಗೆ 1ನೇ ಅರ್ಜಿದಾರಳು ತಂದೆಯ ತಾಯಿಯಾಗಿಯೂ 2ನೇ ಅರ್ಜಿದಾರಳು ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಚಿಕ್ಕಪೇಟೆಗೆ ಕೀರಿದ ಸಂತೋಜಿ ಪೇಟೆ ಸ್ಥಳದ 1ನೇ ದೊಡ್ಡನ್ಯಾನಮ್ಮ, 2ನೇ ಚಿಕ್ಕನ್ಯಾನಮ್ಮನು, ಸದರೀ ಮೈನರಿನ ಆಸ್ತಿ ಕಾಪಾ ಡುವದಕ್ಕೆ ಸರಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟಿರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಯೆ 1889ನೇ ಇಸವಿ ಆಗಸ್ಟ್ ತಾರೀಖು 16ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1889ನೇ ಇಸವಿ ಜುಲೈ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜಿ ನಂಬರ್ 588.

ಕೋಲಾರದಲ್ಲಿ ಇದ್ದು ಮೃತಪಟ್ಟ ಬಳಗೈ ವರದನಮಗ ಗೋವಿಂದಗನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೋಣಂಗಿಗಾನ ಮಗ ಗೋವಿಂದನು, ಮೃತಪಟ್ಟ ಸದರೀ ವರದನಮಗ ಗೋವಿಂದಗನಿಗೆ ಚಿಕ್ಕತಂದೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಸ್ಥಳದ ಕೋಣಂಗಿಗಾನ ಮಗ ಗೋವಿಂದಗನು ಕೋಲಾರದ ವಾಸಸ್ಥನಾಗಿ ಮೃತಪಟ್ಟ ವರದನ ಮಗ ಗೋವಿಂದಗಾನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾನ್ತುದಾರನಾದ ಕೋಣಂಗಿಗಾನ ಮಗ ಗೋವಿಂದಗನ ಅರ್ಜೀಯನ್ನು 1889ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಜಾಬ್ತೆತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವರದನಮಗ ಗೋವಿಂದಗನ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜುಲೈ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಲ್. ಅನಂತಸ್ವಾಮಿರಾವ್,
ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 158.

ಮೃತಪಟ್ಟ ಕೃಷ್ಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸುಬ್ಬರಾವ್, ನಾರಣಪ್ಪನವರು ಸಹ ಮೃತಪಟ್ಟ ಸದರೀ ಕೃಷ್ಣಪ್ಪನವರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ವೈಶ್ಯಾಂಗಿ ಸ್ಥಳದ ಸದರೀ ಸುಬ್ಬರಾವ್, ನಾರಣಪ್ಪನವರು ಮೈಸೂರು ಪಾಸಸ್ಥರಾಗಿ ಮೃತಪಟ್ಟ ಕೃಷ್ಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬರಾವ್, ನಾರಣಪ್ಪನವರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14 ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಪಕ್ಷರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜುಲೈ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡಿಸಿ ಗಿದೆ.

1889ನೇ ಇಸವಿ ಅರ್ಜೀ ನಂಬರ್ 162.

ಮೃತಪಟ್ಟ ವರದಾಚಾರ್ಯರವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟಾಚಾರ್ರು, ಮೃತಪಟ್ಟ ಸದರೀ ವರದಾಚಾರ್ರಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಬನಶಂಕರಿ ದೊಹಲಾ ಹಳ್ಳದಬೀದಿ ನಿವಾಸಿಯಾದ ಸದರೀ ವೆಂಕಟಾಚಾರ್ರು ಸೋಲಾಪುರದ ವಾಸಸ್ಥನಾಗಿ ಮೃತಪಟ್ಟ ವರದಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾಚಾರ್ಯರ ಅರ್ಜಿ ಯನ್ನು 1889ನೇ ಇಸವಿ ಆಗಷ್ಟು ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವರದಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಪಕ್ಷರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 165.

ಮೃತಪಟ್ಟ ಯಡಿಯೂರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಪುಟ್ಟಸಾಮಿಶಟ್ಟಿ, 2ನೇ ಸಿದ್ದಲಿಂಗಪ್ಪ 3ನೇ ಯಡಿಯೂರಪ್ಪ 2–3ನೇ ಮೈನರ್ ಗಾರ್ಡಿಯರ್ 1ನೇ ಪುಟ್ಟಸಾಮಿ ಶಟ್ಟರು, ಮೃತಪಟ್ಟ ಸದರೀ ಯಡಿಯೂರಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯೆದ ತಾಲ್ಲೂಕು ಆನೇ ಹೋಬಳಿ ಬಸಗರಪಳ್ಳಿ ಸ್ಥಳದ ಸದರೀ ಪುಟ್ಟಸಾಮಿಶಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ಯಡಿಯೂರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಸಾಮಿಶಟ್ಟರ ಅರ್ಜಿಯನ್ನು 1889ನೇ ಇಸವಿ ಆಗಸ್ಟ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಯಡಿಯೂರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಪಕ್ಷರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜುಲೈ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡಿಸಿಗಿದೆ.

ಎಸ್. ಹೇಮಾಜಿರಾವ್, ಡಿಸ್ಟ್ರಿಕ್ಟ್ ಜಡ್ಜ್.

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಕಂದಸಾಮಿ ಮೊದ್ದಿಯಾಪನ ವಿಷಯದಲ್ಲಿ—

ಸ್ರ 1889ನೇ ಇಸವಿ ದಿವಾಳೀ ಕೇಸ್ ನಂಬರ್ 14.

ಮೇಲ್ಕಂಡ ಕಂದಸಾಮಿಮೊದ್ದಿಯಾರನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರು ಸುಬ್ಬಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 10ನೇ ಸಿದ್ದಬಸವದೇವರ ತರಫ ಅಡ್ವೊಕೇಟರು ರಾಘವಾಚಾರ್ಯರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರೀಯಾಗಿದ್ದಾಗ್ಯೂ ಮುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ 1ನೇ ಮಧುರಾಪೇಟೆ 2ನೇ ಟೋರ್ಪದ್ಕೇಟಿ 3ನೇ ಟರ್ವಬ್ಯಾಂಕು ಯೇಜಂಟ್ 4ನೇ ಲಕ್ಷ್ಮಯ್ಯಕಟ್ಟಿ 5ನೇ ಜಗನ್ಮೋಹನಬ್ಯಾಂಕು 6ನೇ ರಾಮಚಂದ್ರ ಬ್ಯಾಂಕು 7ನೇ ಮರಿಯಂಣ 8ನೇ ನಂಜುಂಡಮೊದ್ದಿ 9ನೇ ಅರುಣಾಚಲ ಮೊದ್ದಿ 10ನೇ ಸರ್ವಜನವರ್ಧನಿ ಬ್ಯಾಂಕು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕಂದಸಾಮಿಮೊದ್ದಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ನೀಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗಾಕ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೊಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸೆ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1889ನೇ ಇಸವಿ ಜೂನ್ 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನೀಂ ಕೊಡಲ್ಪಟ್ಟಿತು.